## ಖಂಡಾ, ಸಿಖ್ಖರ ಬೃಹತ್ ಲಾಂಛನ



ಇದು ಪಂಜಾಬ್ ರಾಜ್ಯದ ಯಾವುದೋ ಪ್ರಾಂತ್ಯದ ದೃಶ್ಯವಲ್ಲ. ನಮ್ಮ ರಾಜ್ಯದ ಬೀದರ್ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದಾಗಿರುವ 'ನಾನಕ್ ಝಿರಾ ಸಾಹಿಬ್ ಗುರುದ್ವಾರ'ದ ಉದ್ಯಾನವನದಲ್ಲಿ ಕಾಣಸಿಗುವ ಆಕರ್ಷಣೆಯಾಗಿದೆ. ಲೋಹದ ಈ ಬೃಹತ್ ಆಕೃತಿಯು ಸಿಖ್ ಧರ್ಮೀಯರ ಪ್ರಮುಖ ಲಾಂಛನವೆನಿಸಿರುವ 'ಖಂಡಾ'ದ ಪ್ರತಿರೂಪವಾಗಿದೆ. ಸುಮಾರು 4 ಮೀಟರ್ ಎತ್ತರದ ಮಂಟಪದ ಮೇಲೆ ಸುಮಾರು 4 ಮೀಟರ್ ವ್ಯಾಸದ ಫಳಫಳ ಹೊಳೆಯುವ ಈ ರಚನೆಯು ಅವರ ಧಾರ್ಮಿಕ ನೀತಿಗಳನ್ನು ಪ್ರತಿನಿಧಿಸುತ್ತಾ ಪ್ರವಾಸಿಗರನ್ನು ಸೆಳೆಯುತ್ತದೆ.

ಖಂಡಾ ಸಿಖ್ ಧರ್ಮದ ಪ್ರಮುಖ ಸಂಕೇತವಾಗಿದ್ದು 3 ಮುಖ್ಯ ಭಾಗಗಳನ್ನು ಒಳಗೊಂಡಿರುತ್ತದೆ. ಒಂದನೆಯದು, ಲಾಂಛನದ ಮಧ್ಯದಲ್ಲಿ ದ್ವಿಪಕ್ಷೀಯ ಕತ್ತಿ (ದ್ವಿಮುಖ ಹರಿತ ಹೊಂದಿರುವ ಕತ್ತಿ) ಇದೆ. ಇದನ್ನೇ ಖಂಡಾ ಎಂದು ಕರೆಯಲಾಗುತ್ತದೆ. ಇದು ಸತ್ಯ ಮತ್ತು ನ್ಯಾಯದ ರಕ್ಷಣೆಯನ್ನು ಸಂಕೇತಿಸುತ್ತದೆ. ಅಜ್ಞಾನ ಮತ್ತು ಮೂಢನಂಬಿಕೆಗಳನ್ನು ಕಿತ್ತೆಸೆಯುವ ಸಂಕೇತವೂ ಇದಾಗಿದೆ. ಖಡ್ಗಕ್ಕಿಂತಲೂ ಭಾರವಿರುವ ಇದು ಸಿಖ್ಖರ ಆಯುಧಗಳಲ್ಲಿ ಮಹತ್ವದ ಸ್ಥಾನವನ್ನು ಪಡೆದಿದೆ. ಎರಡನೆಯದು, ಎರಡೂ ಬದಿಗಳಲ್ಲಿ ಎರಡು ತಲವಾರುಗಳು ಭಕ್ತಿಯ (ಪಿರಿ) ಮತ್ತು ಶಕ್ತಿಯ (ಮಿರಿ) ಸಂಕೇತವಾಗಿ ಅಸ್ತಿತ್ವದಲ್ಲಿವೆ. ಮೂರನೆಯದು, ವೃತ್ತಾಕಾರದ ಚಕ್ರವು ಆರಂಭ ಮತ್ತು ಅಂತ್ಯವಿಲ್ಲದ 'ಒಂದೇ ದೇವರ' ಅಸ್ತಿತ್ವವನ್ನು ಸಾರುತ್ತಾ ವಿಶ್ವದ ಏಕತೆಯನ್ನು ಪ್ರತಿನಿಧಿಸುತ್ತದೆ. ಇದನ್ನು 'ಕಡಾರ'ವೆನ್ನುತ್ತಾರೆ.

ಈ ಲಾಂಛನವನ್ನು ಸಾಮಾನ್ಯವಾಗಿ ಗುರುದ್ವಾರಗಳ ಮುಂಭಾಗದಲ್ಲಿ ಹಾರಿಸುವ 'ನಿಶಾನ್ ಸಾಹಿಬ್' ಎಂಬ ಸಿಖ್ ಧರ್ಮದ ಧ್ವಜದಲ್ಲಿ ಕಾಣಬಹುದು ಹಾಗೂ ಯಾವುದೇ ವ್ಯಕ್ತಿಯು ಗುರುದ್ವಾರಕ್ಕೆ ಆಗಮಿಸಿದಾಗ ಅದನ್ನು ವಂದಿಸುವುದು ಗೌರವದ ಸಂಕೇತವಾಗಿದೆ. ಧ್ವಜದ ಹೊರತಾಗಿ ಬೃಹತ್ ಲೋಹದ ಆಕೃತಿಯನ್ನು ಈ ರೀತಿ ಉದ್ಯಾನವನದಲ್ಲಿ ಅಳವಡಿಸಿರುವುದು ಇಲ್ಲಿನ ವಿಶೇಷತೆಯಾಗಿದೆ. ಮನಮೋಹಕವಾಗಿರುವ ಇದರ ಕೆಳಗಿನ ಮಂಟಪದಲ್ಲಿ ಮೆದು ಚಾದರಗಳನ್ನು ಹಾಸಿದ್ದು ಯಾತ್ರಾರ್ಥಿಗಳು ಪವಡಿಸಿ ತೋಟದ ತಂಪು ಹವೆಯಲ್ಲಿ ವಿರಮಿಸಬಹುದಾಗಿದೆ.

**–ರಮಣ್ ಶೆಟ್ಟಿ ರೆಂಜಾಳ, ಮುಂಬೈ**

## ನೇಗಿಲು ಗೆಣಸು ಕಂಡೀರಾ?

ಅರೆರೆ... ಗೆಣಸು ಅಂದರೆ ನೆಲದೊಳಗಿನ ಮಣ್ಣಿನಲ್ಲಿ ಮಾತ್ರ ಬೆಳೆಯುತ್ತದೆ ಎಂದು ನಾವು ತಿಳಿದಿದ್ದೇವೆ. ಆದರೆ ಇಲ್ಲಿ ನೋಡಿ, ಚಿತ್ರದಲ್ಲಿ ಕಾಣುತ್ತಿರುವ ಚಿತ್ರವು ಗೆಣಸಿನ ಬಗೆಗಿನ ನಮ್ಮ ಈ ಹಿಂದಿನ ನಂಬಿಕೆಯನ್ನು ಹುಸಿಯಾಗಿಸಿದೆ. ಮರಕ್ಕೆ ಹಬ್ಬಿದ ಹಸಿರು ಬಳ್ಳಿಯ ತುಂಬಾ ಗೊಂಚಲು ಗೊಂಚಲಾಗಿ ಈ ಗೆಣಸು ಬೆಳೆದಿದೆ. ಇದು ಮಲೆನಾಡಿನ ಹಿತ್ತಲ ತರಕಾರಿಗಳ ನಡುವೆ ಬೆಳೆಯುವ ಅಪರೂಪದ ನೇಗಿಲ ಗೆಣಸು. ನೇಗಿಲಿನ ಆಕೃತಿಯಲ್ಲಿ ಮೂಡಿ ಬಂದ ಬಗೆ ಬೆರಗುಗೊಳಿಸುತ್ತದೆ. ಈ ಗೆಣಸನ್ನು ಸಾರು, ಪಲ್ಯ, ಉಸುಳಿ, ಬಜೆ ಸೇರಿದಂತೆ ವಿವಿಧ ಅಡುಗೆಯ ಪದಾರ್ಥಗಳಿಗೆ ಬಳಸುತ್ತಾರೆ. ಬಳ್ಳಿಗೆ ಗೆಜ್ಜೆ ಕಟ್ಟಿದ ಹಾಗೆ ಅಲಂಕರಿಸಿರುವ ಈ ನೇಗಿಲ ಗೆಣಸನ್ನು, ಅದರ ಬಳ್ಳಿಯ ಕುಡಿಯನ್ನೇ ನೆಟ್ಟು ಬೆಳೆಸಬಹುದು. ಉತ್ತರಕನ್ನಡದ ಯಲ್ಲಾಪುರದ ನಳಿಗುಳಿಯ ಕೃಷಿಕ ಗಜಾನನ ಭಟ್ಟರ ಮನೆಯ ಹಿತ್ತಲಲ್ಲಿ ಸಾಂಪ್ರದಾಯಿಕ ಬೆಳೆಯಾಗಿ ಕಾಣಸಿಕ್ಕಿತು.

**–ದತ್ತಾತ್ರೇಯ ಭಟ್ಟ, ಕಣ್ಣಿಪಾಲ**




## ಕಾಪುವಿನಲ್ಲಿ ಕಂಡ ಬೃಹತ್ ಘಂಟೆ



ತುಳುಭಾಷೆಯಲ್ಲಿ 'ಕಾಪು' ಎಂದರೆ ಎಲ್ಲರನ್ನೂ ಕಾಪಾಡು ಎಂದರ್ಥ. ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕಾಪು ಎಂಬ ಚಿಕ್ಕ ಊರು ಕೆಲ ವಿಷಯಗಳಿಗೆ ಪ್ರಸಿದ್ಧಿ ಪಡೆದಿದೆ. ಅವುಗಳಲ್ಲಿ ಮನೋಹರಗಢ ಕೋಟೆ, ಕಾಂತಾರ ಹೌಸ್, ಸಮುದ್ರ ದಂಡೆಯಲ್ಲಿನ ದೀಪಸ್ತಂಭ ಹಾಗೂ ಶಕ್ತಿದೇವತೆ ಮಾರಿಯಮ್ಮನ ದೇವಸ್ಥಾನ ಪ್ರಮುಖವಾದವು. ಕಾಪು ಮಾರಿಯಮ್ಮನ ದೇವಸ್ಥಾನದಲ್ಲಿ ಪ್ರತೀ ವರ್ಷ ನಡೆಯುವ ಮಾರಿ ಹಬ್ಬ ತುಂಬಾ ವಿಶೇಷ. ಇದೀಗ ದೇವಸ್ಥಾನ ಜೀರ್ಣೋದ್ಧಾರಗೊಂಡು ಹೊಸ ರೂಪ ತಳೆದಿದೆ. ಭಕ್ತಾದಿಗಳ ನೆರವಿನಿಂದ ನಿರ್ಮಾಣಗೊಂಡ ನೂತನ ದೇಗುಲಕ್ಕೆ 15 ಕೆ.ಜಿ. ಚಿನ್ನ ಮತ್ತು 175 ಕೆ.ಜಿ. ಬೆಳ್ಳಿ ಲೇಪಿತ ರಜತರಥ ಸಮರ್ಪಣೆಯಾಗಿದೆ.

ಹಾಗೆಯೇ ಕೊಡುಗೆಯಾಗಿ ಬಂದ ಬೃಹತ್ ಘಂಟೆಯೊಂದು ಆಕರ್ಷಣೆಯ ಕೇಂದ್ರವಾಗಿದೆ. 5 ಅಡಿ ಎತ್ತರ, 4 ಅಡಿ ಅಗಲ ಮತ್ತು 1500 ಕೆ.ಜಿ. ತೂಕದ ಘಂಟೆಯನ್ನು ಅಯೋಧ್ಯೆಯ ರಾಮಮಂದಿರದಲ್ಲಿನ ಮಾದರಿಯಂತೆ ರಚಿಸಿದ್ದು, ನಮ್ಮ ದೇಶದಲ್ಲಿ ಎರಡನೇ ಬೃಹತ್ ಘಂಟೆ ಎಂಬ ಹೆಗ್ಗಳಿಕೆ ಪಡೆದಿದೆ. ಅಲ್ಲದೆ ಕರ್ನಾಟಕದಲ್ಲೇ ಪ್ರಥಮವಾಗಿದೆ. ಅಂದ ಹಾಗೆ ಗಂಟೆಯ ನಾದ 3 ಕಿ.ಮೀ. ದೂರದವರೆಗೆ ಕೇಳಿಸುತ್ತದೆ.

**–ಜೀವನ್ ಶೆಟ್ಟಿ, ಉಡುಪಿ**